Mob:- 9845937211

13


# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ದಾಸರಹಳ್ಳಿ ವಲಯ,
ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.


ನಂ:ಕಾ.ಪಾ.ಅ/ದಾ.ವಿ/ಕೊಟೇಶನ್-03/13-14/A

ಕಾರ್ಯಪಾಲಕ ಅಭಿಯಂತರವರ ಕಛೇರಿ,
ದಾಸರಹಳ್ಳಿ ವಿಭಾಗ. ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:28/11/2013.

ರವರಿಗೆ,
ಶ್ರೀ.ಬಿ.ಜೆ. ಕುಮಾರ
#01, ಶ್ರೀ.ನಿಲಯ, ರಂಗಮಂದಿರ ಹಿಂಬಾಗ,
ಬಾಗಲಗುಂಟೆ,
ಬೆಂಗಳೂರು-560073.

## "ಸರಬರಾಜು ಆದೇಶ"

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ:39ಕ್ಕೆ 01-ಡಿಸೆಂಬರ್-2013 ರಿಂದ ಮುಂದಿನ ಆದೇಶದವರೆಗೆ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾರ್ಯಕ್ಕೆ ಕಾರ್ಮಿಕರು, ಟಿಪ್ಪರ್ ಲಾರಿ ಹಾಗು 02 ಜನ ಸೂಪರ್‌ವೈಸರ್‌ಗಳನ್ನು ಪೂರೈಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿಯ ಅಲ್ಪಾವಧಿ ಕೊಟೇಶನ್ ಸಂಖ್ಯೆ: **BBMP/EE /DD/Quo-3/2013-14,** ದಿನಾಂಕ:25.11.2013.

************

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ:39ರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕೆಲಸಕ್ಕೆ ತಾವುಗಳು ಕಾರ್ಮಿಕರಿಗೆ ಹಾಗು ಟಿಪ್ಪರ್ ಲಾರಿಗೆ ಸಲ್ಲಿಸಿರುವ ದರವು ಅತಿ ಕಡಿಮೆ ದರವಾಗಿರುತ್ತದೆ. ಹಾಗು ಸೂಪರ್ ವೈಸರ್‌ಗಳಿಗೆ ತಾವುಗಳು ಹಾಗು ಶ್ರೀ.ಎ.ಜಿ.ಪ್ರಭಾಕರ್‌ರವರು ಸಲ್ಲಿಸಿರುವ ದರಗಳು ಸಮನಾದ ದರಗಳಾಗಿರುತ್ತವೆ.ಕಾರಣ ಕಾರ್ಮಿಕರನ್ನು ಹಾಗು ಟಿಪ್ಪರ್ ಲಾರಿಯನ್ನು ಮೇಲ್ವಿಚಾರಣೆ ಮಾಡಲು 02 ಜನ ಮೇಲ್ವಿಚಾರಕರನ್ನು ಸರಬರಾಜು ಮಾಡಲು ತಮಗೆ ಹಾಗು ಆಟೋ ಟಿಪ್ಪರ್ ಹಾಗು ಕಾಂಪ್ಯಾಕ್ಟರ್ ವಾಹನಗಳನ್ನು ಮೇಲ್ವಿಚಾರಣೆ ಮಾಡಲು 02 ಜನ ಮೇಲ್ವಿಚಾರಕರನ್ನು ಸರಬರಾಜು ಮಾಡಲು ಶ್ರೀ.ಎ.ಜಿ.ಪ್ರಭಾಕರ್‌ರವರಿಗೆ ಪ್ರತ್ಯೇಕ ಸರಬರಾಜು ಆದೇಶ ನೀಡಲಾಗುತ್ತಿದೆ.

ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲು ಸಕ್ಷಮ ಪ್ರಾಧಿಕಾರವು ನೀಡಿದ ಅನುಮೋದನೆಯಂತೆ ಹಾಗು ತಾವುಗಳು ಸಲ್ಲಿಸಿದ ಕೊಟೇಶನ್ ದರದಂತೆ ತಾವುಗಳು ಈ ಕೆಳಕಂಡಂತೆ ಕಾರ್ಮಿಕರನ್ನು ಹಾಗು ವಾಹನಗಳನ್ನು ಷರತ್ತು ಹಾಗು ನಿಬಂಧನೆಗೊಳಪಟ್ಟು ದಿನಾಂಕ:01/12/2013 ರಿಂದ ಮುಂದಿನ ಆದೇಶದವರೆಗೆ ಪೂರೈಸಲು ಸೂಚಿಸಿದೆ.

| ಕ್ರ.ಸಂ | ಸಿಬ್ಬಂದಿ, ವಾಹನ ಮತ್ತು ಸಲಕರಣೆಗಳ ವಿವರಗಳು | ಒದಗಿಸಬೇಕಾಗಿರುವ ಸಂಖ್ಯೆ | ಸಲ್ಲಿಸಿರುವ ದರ |
|---|---|---|---|
| 1 | ಅ) ಕಾರ್ಮಿಕರು -ರಸ್ತೆ ಗುಡಿಸುವ ಕೆಲಸಕ್ಕೆ<br>ಆ) ಕಾರ್ಮಿಕರು-ಸ್ಮಶಾನ ಸ್ವಚ್ಛಗೊಳಿಸಲು<br>ಇ) ಕಾರ್ಮಿಕರು-ಆಟದ ಮೈದಾನ ಸ್ವಚ್ಛಗೊಳಿಸಲು | 109 | ರೂ..9136/- ಪ್ರತಿ ಯುನಿಟ್‌ಗೆ |

| | | | |
|---|---|---|---|
| 2. | ಟಿಪ್ಪರ್ ಲಾರಿ<br>ಒಬ್ಬ ಡ್ರೈವರ್ ಹಾಗು 04 ಜನ ಲೋಡರ್ಸ್ ಹಾಗು ಅವರಿಗೆ ರಕ್ಷಣಾ ಸಾಮಗ್ರಿ ಹಾಗು ಸಮವಸ್ತ್ರ ಸೇರಿ) | 1 | ರೂ:91000/- ಪ್ರತಿ ಲಾರಿಗೆ |
| 3. | ಮೇಲ್ವಿಚಾರಕರು<br>(ಸಮವಸ್ತ್ರ ಒಳಗೊಂಡಂತೆ) | 2 | ರೂ.9,885/- ಯುನಿಟ್‌ಗೆ |
| | ಒಟ್ಟು ಮೊತ್ತ | | 11,06,594 |

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ.

## ಷರತ್ತು ಮತ್ತು ನಿಬಂಧನೆಗಳು.

1. ತಾವುಗಳು ಕೆಲಸ ಪ್ರಾರಂಭಿಸುವ ಮುನ್ನ ಕಾರ್ಮಿಕ ಇಲಾಖೆಯಿಂದ ಪರವಾನಗಿಯನ್ನು ಪಡೆಯತಕ್ಕದ್ದು. ಹಾಗು ಇದರ ಪ್ರತಿಯನ್ನು ಕಛೇರಿಗೆ ಸಲ್ಲಿಸತಕ್ಕದ್ದು.
2. ಪ್ರತಿ ನಿತ್ಯ ತಾವುಗಳು ಸಲ್ಲಿಸಿದ ಕೊಟೇಶನ್‌ನಂತೆ ಕಾರ್ಮಿಕರನ್ನು ಹಾಗು ವಾಹನಗಳನ್ನು ಪೂರೈಸಬೇಕು.
3. ತಮ್ಮಿಂದ ಕಾರ್ಯ ನಿರ್ವಹಿಸುವ ಎಲ್ಲಾ ಕಾರ್ಮಿಕರು, ವಾಹನಗಳ ಚಾಲಕರು ಹಾಗು ಮೇಲ್ವಿಚಾರಕರಿಗೆ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ಪಾವತಿಯಾಗುವಂತೆ ಚೆಕ್/ಇಸಿಎಸ್/ಡೈರಕ್ಟ್ ಕ್ರೆಡಿಟ್ ಮೂಲಕ ವೇತನ ಹಾಗು ಇ.ಎಸ್.ಐ/ ಪಿಎಫ್‌ನ್ನು ತಪ್ಪದೇ ಪಾವತಿಸಬೇಕು.
4. ತಮ್ಮ ಕಾರ್ಮಿಕರು 14 ದಿನಕ್ಕಿಂತ ಕಡಿಮೆಯಿಲ್ಲದೇ ಕೆಲಸ ನಿರ್ವಹಿಸಿದ್ದಲ್ಲಿ ಆತನಿಗು ಕೂಡ ಚೆಕ್/ ಇಸಿಎಸ್/ಡೈರಕ್ಟ್ ಕ್ರೆಡಿಟ್ ಮೂಲಕ ವೇತನ ಪಾವತಿಸಬೇಕು.
5. ಕಾರ್ಮಿಕರಿಗೆ ವೇತನವನ್ನು ಕಾರ್ಮಿಕ ಇಲಾಖೆಯವತಿಯಿಂದ ಹೊರಡಿಸಿದ ಸುತ್ತೋಲೆ ಆದೇಶ ಸಂಖ್ಯೆ: **KE/152/LWA/2008, Date:21/02/2011**ರಂತೆ ನೀಡಬೇಕು ಹಾಗು ಕಾರ್ಮಿಕ ಇಲಾಖೆಯು ದಿನಾಂಕ:01/04/2013 ರಿಂದ ಕಾರ್ಮಿಕರ DA ಯನ್ನು ಪ್ರಕಟಿಸಿದ್ದು ಸದರಿ ನಿಯಮಾನುಸಾರ ಕಾರ್ಮಿಕರಿಗೆ ವೇತನ ಪಾವತಿಸಬೇಕು.
6. ತಾವುಗಳು ಕಾರ್ಮಿಕರಿಗೆ ವೇತನ ಪಾವತಿಸುವ ಸಮಯದಲ್ಲಿ ಬಿ.ಬಿ.ಎಂ.ಪಿ ಯ ಅಧಿಕಾರಿ ಹಾಗು ಸಿಬ್ಬಂಧಿಯ ಸಮ್ಮುಖದಲ್ಲಿ ನೀಡತಕ್ಕದ್ದು.
7. ಕಾರ್ಮಿಕರಿಗೆ ಇಎಸ್‌ಐ ಹಾಗು ಪಿಎಫ್‌ನ್ನು ಈ ಕೆಳಕಂಡ ನಿಯಮದಂತೆ ಪಾವತಿಸಲು ಹಾಗು ಪಾವತಿಸಿದ ದಾಖಲೆಗಳನ್ನು ತಿಂಗಳ ಕೊನೆಯ ಬಿಲ್‌ನೊಂದಿಗೆ ಆರೋಗ್ಯ ಪರಿವೀಕ್ಷಕರು, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರುರವರ ದೃಢೀಕರಣ ಪಡೆದು ಕಛೇರಿಗೆ ಸಲ್ಲಿಸತಕ್ಕದ್ದು.

| ಕ್ರ.ಸಂ | ವಂತಿಕೆ | ಇಎಸ್‌ಐ | ಪಿಎಫ್ | ಒಟ್ಟು |
|---|---|---|---|---|

| | | | | |
|---|---|---|---|---|
| 1. | ಕಾರ್ಮಿಕರ ವಂತಿಕೆ | 1.75% | 12% | 13.75% |
| 2. | ಗುತ್ತಿಗೆದಾರರ ವಂತಿಕೆ | 4.75% | 13.61% | 18.36% |
| | | ಒಟ್ಟು | | 32.11% |

8. ತಮ್ಮಿಂದ ಕಾರ್ಯ ನಿರ್ವಹಿಸುವ ಎಲ್ಲಾ ಕಾರ್ಮಿಕರ ವಯಸ್ಸು ಕನಿಷ್ಠ 18 ವರ್ಷ ಹಾಗು ಗರಿಷ್ಠ 60 ವರ್ಷದ ವಯಸ್ಸಿನವರಾಗಿರಬೇಕು. ಹಾಗು ಕನಿಷ್ಠ 30%ರಷ್ಟು ಕಾರ್ಮಿಕರು ಪುರುಷ ಕಾರ್ಮಿಕರಾಗಿರಬೇಕು.

9. ತಮ್ಮ ಬಳಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕರಿಗೆ ಗುರುತಿನ ಚೀಟಿಯನ್ನು ನೀಡಬೇಕು ಹಾಗು ಗುರುತಿನ ಚೀಟಿಯಲ್ಲಿ ಕಾರ್ಮಿಕರ ಇ.ಎಸ್.ಐ/ಪಿಎಫ್‌ನ ನೋಂದಣಿ ಸಂಖ್ಯೆಯನ್ನು ದಾಖಲಿಸಿರಬೇಕು.

10. ತಮ್ಮ ಕಾರ್ಮಿಕರಿಗೆ ರಕ್ಷಣಾ ಸಾಮಗ್ರಿಗಳಾದ ಮಾಸ್ಕ್, ಕೈಗವಸ, ಗಮ್ ಬೂಟ್ಸ್,ಕ್ಯಾಪ್ಸ್, ಚಪ್ಪಲ್‌ಗಳು, ಲಾಂಗ್ ಹ್ಯಾಂಡಲ್ ಬ್ರೂಮ್ಸ್, ಸ್ಕ್ರ್ಯಾಪರ್ಸ್, ಕಲೆಕ್ಷನ್ ಪ್ಲೇಟ್, ಗ್ಯಾಮೆಲಾ, ಚರಂಡಿ ಸ್ವಚ್ಛಗೊಳಿಸುವ ಸಾಮಗ್ರಿಗಳು, ಸ್ಪೇಡ್, ಗಿಡ ಕತ್ತರಿಸುವ ಯಂತ್ರಗಳನ್ನು ನೀಡಬೇಕು ಹಾಗು ಎಲ್ಲಾ ಕಾರ್ಮಿಕರಿಗೆ, ವಾಹನ ಚಾಲಕರಿಗೆ ಹಾಗು ಮೇಲ್ವಿಚಾರಕರಿಗೆ ಸಮವಸ್ತ್ರಗಳನ್ನು ನೀಡಬೇಕು.

11. ಹಸಿ ಕಸವನ್ನು ದಿನನಿತ್ಯ ಹಾಗು ಒಣ ಕಸವನ್ನು ಪುರಕ್ಕೆರಡು ಬಾರಿ ಪ್ರತ್ಯೇಕವಾಗಿ ಮನೆ ಮನೆಯಿಂದ ಹಾಗು ವಾಣಿಜ್ಯ ಸಂಕೀರ್ಣಗಳಿಂದ ಸಂಗ್ರಹಿಸಬೇಕು. ಒಣ ಕಸವನ್ನು ವಾರ್ಡ್‌ವತಿಯಿಂದ ನಿರ್ಮಿಸಿದ ಒಣತ್ಯಾಜ್ಯ ಸಂಗ್ರಹಣ ಕೇಂದ್ರಗಳಿಗೆ ನೀಡಬೇಕು.

12. ವಾರ್ಡ್ ವ್ಯಾಪ್ತಿಯಲ್ಲಿನ ಕಸದ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿ ನಿತ್ಯ ತೆಗೆದು ಸ್ವಚ್ಛಗೊಳಿಸಬೇಕು ಹಾಗು ಈ ಕುರಿತಂತೆ ಬ್ಲಾಕ್ ಸ್ಪಾಟ್‌ಗಳಿಗೆ ಕಸ ಹಾಕುತ್ತಿರುವ ಸಾರ್ವಜನಿಕರಿಗೆ ಅರಿವು ಮೂಡಿಸಿ ಬ್ಲಾಕ್ ಸ್ಪಾಟ್‌ಗಳಿಗೆ ಹಾಕದಂತೆ ತಿಳಿಸಬೇಕು.

13. ರಸ್ತೆಗಳು, ರಸ್ತೆ ಬದಿಯ ಚರಂಡಿಗಳು, ಪುಟ್ ಪಾತ್‌ಗಳು,ಕನ್ಸ್‌ರ್ವೆನ್ಸಿಗಳು, ರಸ್ತೆ ಬದಿಯ ಗಿಡ ಗಂಟಿಗಳು ಹಾಗು ಶೋಲ್ಡರ್ ಡ್ರೈನ್‌ಗಳನ್ನು ದಿನನಿತ್ಯ ಸ್ವಚ್ಛಗೊಳಿಸಬೇಕು.

14. ಮೂಲದಲ್ಲೇ ಕಸ ವಿಂಗಡಿಸುವ ಕುರಿತಂತೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಹಾಗು ಅದಕ್ಕೆ ಸಂಬಂಧಿಸಿದಂತೆ ಮಾಹಿತಿ ಶಿಕ್ಷಣ ಹಾಗು ಸಂವಹನ (IEC Activities) ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

15. ತಮ್ಮಿಂದ ನಿಯೋಜಿಸಿರುವ ಮೇಲ್ವಿಚಾರಕರ ಮೊಬೈಲ್ ಸಂಖ್ಯೆಯನ್ನು ಕಛೇರಿಗೆ ನೀಡಬೇಕು.

16. ಘನತ್ಯಾಜ್ಯ ನಿರ್ವಹಣೆಯಲ್ಲಿ ನಿವಾಸಿಗಳು, ಬಡಾವಣೆಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ತೊಡಗಿಸಿಕೊಳ್ಳಬೇಕು.

17. ಆಟೋ ಟಿಪ್ಪರ್‌ಗಳಿಗೆ ಧ್ವನಿ ವರ್ಧಕಗಳನ್ನು (ಮೈಕ್) ಅಳವಡಿಸಬೇಕು.

18. ಸಾರ್ವಜನಿಕರು ಮನೆಮನೆಯಿಂದ ಕಸವನ್ನು ನೀಡದಿದ್ದಲ್ಲಿ ಈ ಕುರಿತಾದ ಮಾಹಿತಿಯನ್ನು ಸ.ಕಾ.ಅ ಪೀಣ್ಯಾ ಕೈಗಾರಿಕ ಪ್ರದೇಶ ಉಪವಿಭಾಗರವರಿಗೆ ಲಿಖಿತ ರೂಪದಲ್ಲಿ ನೀಡಬೇಕು.

19. ತಮ್ಮಗಳ ಕಾರ್ಮಿಕರು ಪಾಲಿಕೆಗೆ ಸಂಬಂಧಿಸಿದ ಆಸ್ತಿಗಳನ್ನೇನಾದರು ನಾಶ ಮಾಡಿದಲ್ಲಿ ತಾವೇ ನೇರವಾಗಿ ಹೊಣೆಗಾರರು.

20. ತಾವುಗಳು ಪೂರೈಸುವ ವಾಹನಗಳು 2006 ರಿಂದ 2012ರ ಮಾಡೆಲ್‌ಗಳಾಗಿರಬೇಕು. ವಾಹನಗಳ ರಿಜಿಸ್ಟ್ರೇಷನ್ ಸಂಖ್ಯೆ ಹಾಗು ಮಾಡೆಲ್‌ಗಳ ಕುರಿತಾದ ಮಾಹಿತಿಯನ್ನು ಕೂಡಲೇ ಕಛೇರಿಗೆ ತಿಳಿಸಬೇಕು.

16

21. ತಮ್ಮ ವಾಹನಗಳನ್ನು ತಮ್ಮ ಚಾಲಕರು ಎಲ್ಲೆಂದರಲ್ಲಿ ನಿಲ್ಲಿಸದಂತೆ, ಸಾರ್ವಜನಿಕರಿಗೆ ಹಾಗು ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ವಹಿಸಬೇಕು.

22. ಸದರಿ ಸರಬರಾಜು ಆದೇಶವು, ಕಾಲಕಾಲಕ್ಕೆ ಘನ ನ್ಯಾಯಾಲಯವು ಹಾಗು ಕೇಂದ್ರ ಕಛೇರಿಯು ನೀಡುವ ಸಲಹೆ, ಸೂಚನೆ ಹಾಗು ನಿರ್ದೇಶನಗಳಗೆ ಒಳಪಟ್ಟಿರುತ್ತದೆ.

23. ತಾವುಗಳು ಸ್ವಚ್ಛತಾ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಹಬ್ಬಗಳಂದ ಕಸದ ಪ್ರಮಾಣವು ಜಾಸ್ತಿಯಾದಲ್ಲಿ ಸದರಿ ಕಸವನ್ನು ತಾವುಗಳೇ ವಿಲೇವಾರಿ ಮಾಡತಕ್ಕದ್ದು.

24. ವಲಯ ಕಛೇರಿಯಲ್ಲಿ ಅಥವಾ ಉಪವಿಭಾಗ ಕಛೇರಿಯಲ್ಲಿ ಚುನಾಯಿತ ಪ್ರತಿನಿಧಿಗಳಾದ ಮಾನ್ಯ ಶಾಸಕರು ಅಥವಾ ಪಾಲಿಕೆಯ ಸದಸ್ಯರೇನಾದರು ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಯ ಕುರಿತು ಸಭೆಯನ್ನು ನಡೆಸಿದಲ್ಲಿ ತಾವುಗಳು ತಪ್ಪದೇ ಹಾಜರಾಗತಕ್ಕದ್ದು.

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ.

ಪ್ರತಿಯನ್ನು

1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯಾ ಕೈಗಾರಿಕ ಪ್ರದೇಶ ಉಪವಿಭಾಗರವರ ಮಾಹಿತಿಗಾಗಿ ಹಾಗು ಮೇಲ್ಕಂಡ ಷರತ್ತು ಮತ್ತು ನಿಬಂದನೆಗಳನ್ನು ಸರಬರಾಜುದಾರರು ಸರಿಯಾಗಿ ಪಾಲನೆ ಮಾಡಿದ್ದಾರೆಯೆ ಎಂಬ ಬಗ್ಗೆ ತಮ್ಮ ಹಂತದಲ್ಲೇ ಪರಿಶೀಲಿಸಿಕೊಂಡು ಪ್ರತಿ ತಿಂಗಳ 03ನೇ ತಾರೀಖಿನೊಳಗೆ ಅಗತ್ಯ ದಾಖಲೆಗಳೊಂದಿಗೆ (ಫೋಟೋಗಳ ಸಮೇತ) ತಪ್ಪದೇ ಬಿಲ್‌ನ್ನು ವಿಭಾಗ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

O/C

(1) B.T. [illegible]

(2)

Received Copy
28/4

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು –560073.

ಸಂ:ಕಾ.ಅ/ದಾ.ವಿ/ಕೋಟೇಶನ್–03/2014–15/A

ಕಾರ್ಯಪಾಲಕ ಅಭಿಯಂತರರ ಕಛೇರಿ,
ದಾಸರಹಳ್ಳಿ ವಿಭಾಗ
ದಿನಾಂಕ: 05/12/2014

### ಪರಿಷ್ಕೃತ ಸರಬರಾಜು ಆದೇಶ

**ವಿಷಯ:–** ದಾಸರಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ:39ರ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾರ್ಯ ನಿರ್ವಹಿಸಲು ದಿನಾಂಕ:01/04/2014 ರಿಂದ ಅನ್ವಯವಾಗುವಂತೆ ಕಾರ್ಮಿಕ ಇಲಾಖೆಯು ಹೆಚ್ಚಿಸಿದ ತುಟ್ಟಿಭತ್ಯೆಯನ್ನು ವಾರ್ಡ್ ನಿರ್ವಹಣೆ ವೆಚ್ಚಕ್ಕೆ ಸೇರಿಸಿ ಪರಿಷ್ಕೃತ ಸರಬರಾಜು ಆದೇಶ ಪತ್ರ ನೀಡುವ ಬಗ್ಗೆ.

**ಉಲ್ಲೇಖ:–**
1. ಈ ಕಛೇರಿಯ ಅಲ್ಪಾವಧಿ ಕೋಟೇಷನ್ ಸಂಖ್ಯೆ::BBMP/EE/DD/Quo-3/2013-14 ದಿನಾಂಕ:25.11.2013.
2. ವಾರ್ಡ್ ಸಂಖ್ಯೆ:39ರ ಘನತ್ಯಾಜ್ಯ ನಿರ್ವಹಣೆ & ವಿಲೇವಾರಿಗೆ ಶ್ರೀ.ಬಿ.ಜೆ.ಕುಮಾರರವರೊಂದಿಗೆ ವಿಭಾಗ ಕಛೇರಿಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯ ಪತ್ರದ ಸಂಖ್ಯೆ:BBMP/EE/DD/QUO-03/2013–14/A. ದಿನಾಂಕ:28.11.2013.
3. ಈ ಕಛೇರಿಯವತಿಯಿಂದ ಶ್ರೀ.ಬಿ.ಜೆ.ಕುಮಾರರವರಿಗೆ ನೀಡಿದ ಸರಬರಾಜು ಆದೇಶ ಪತ್ರ ಸಂಖ್ಯೆ: ಕಾ.ಪಾ.ಅ/ದಾ.ವಿ/ಕೋಟೇಷನ್–03/13–14/A, ದಿನಾಂಕ:28/11/2013.
4. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಆ/ಪಿಆರ್/ಜಿ–3971/14–15, ದಿನಾಂಕ:18.08.2014.

********

ಮೇಲ್ಕಂಡ ವಿಷಯ ಹಾಗು ಉಲ್ಲೇಖ ಪತ್ರಗಳಿಗೆ ಸಂಬಂಧಿಸಿದಂತೆ, ಶ್ರೀ.ಬಿ.ಜೆ.ಕುಮಾರರವರಿಗೆ ದಾಸರಹಳ್ಳಿ ವಲಯದ ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗದ ವಾರ್ಡ್ ಸಂಖ್ಯೆ:39ರ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಯನ್ನು ನಿರ್ವಹಿಸಲು 109 ಜನ ಕಾರ್ಮಿಕರು, 01 ಟಿಪ್ಪರ್ ಲಾರಿ ಹಾಗು 02 ಜನ ಮೇಲ್ವಿಚಾರಕರನ್ನು ಸರಬರಾಜು ಮಾಡಲು ಉಲ್ಲೇಖ (2) ರಂತೆ ಒಡಂಬಡಿಕೆ ಮಾಡಿಕೊಂಡು ಉಲ್ಲೇಖ (3) ರಂತೆ ಈ ಕಛೇರಿಯವತಿಯಿಂದ ಸರಬರಾಜು ಆದೇಶವನ್ನು ನೀಡಲಾಗಿರುತ್ತದೆ.

ಉಲ್ಲೇಖ (2) ರಂತೆ ಈ ಕಛೇರಿಯವತಿಯಿಂದ ಸರಬರಾಜುದಾರರಾದ ಶ್ರೀ.ಬಿ.ಜೆ.ಕುಮಾರ ರವರೊಂದಿಗೆ ಮಾಡಿಕೊಂಡ ಒಡಂಬಡಿಕೆ ಪತ್ರದ Article 4 "Payment Terms" ರಡಿಯಲ್ಲಿ ಕ್ರಮ ಸಂಖ್ಯೆ "ಸಿ" ರನ್ವಯ *ಸರಬರಾಜುದಾರರು ಅವರ ಕಾರ್ಮಿಕರಿಗೆ ಸರ್ಕಾರದ ಆದೇಶ ಸಂಖ್ಯೆ:KE/152/LWA/2008, ದಿನಾಂಕ:21/02/2011 ರನ್ವಯ ವೇತನ ನೀಡುವುದು ಹಾಗು ಕಾರ್ಮಿಕ ಇಲಾಖೆಯು ಭವಿಷ್ಯದಲ್ಲಿ ಕಾರ್ಮಿಕರ ವೇತನವನ್ನು ಹೆಚ್ಚಿಸಿದಲ್ಲಿ ಸದರಿ ವೇತನದ ವ್ಯತ್ಯಾಸವನ್ನು ಪಾಲಿಕೆಯವತಿಯಿಂದ ಭರಿಸುವುದು*" ಎಂದು ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ.

ಕಾರ್ಮಿಕ ಇಲಾಖೆಯು ದಿನಾಂಕ:01/04/2014 ರಿಂದ ದಿನಾಂಕ:31/03/2015 ರವರೆಗೆ ಪ್ರತಿ ಮಾಹೆಗೆ ಪ್ರತಿ ಕಾರ್ಮಿಕರಿಗೆ ರೂ:846/–ಗಳ ತುಟ್ಟಿ ಭತ್ಯೆಯನ್ನು ಪ್ರಕಟಿಸಿದ್ದು, ಉಲ್ಲೇಖ(4)ರ ಮಾನ್ಯ ಆಯುಕ್ತರವರ ಕಛೇರಿ ಆದೇಶದಂತೆ ವಾರ್ಡ್ ಸಂಖ್ಯೆ:39 ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ 116 ಜನ ಕಾರ್ಮಿಕರಿಗೆ

ತುಟ್ಟಿ ಭತ್ಯೆಯ ಜೊತೆಗೆ ಶೇ.18.36 ರಷ್ಟು ಗುತ್ತಿಗೆದಾರರ ಇಎಸ್ಐ ಹಾಗು ಪಿಎಫ್ ವಂತಿಕೆ ಸೇರಿಸಿ ಈ ಹಿಂದಿನ ವಾರ್ಡ್ ನಿರ್ವಹಣೆ ಮೊತ್ತ ರೂ:11,06,594/-ಗಳಿಗೆ ರೂ:1,16,154/-ಗಳ ತುಟ್ಟಿಭತ್ಯೆ ಮತ್ತು ಶೇ.18.36ರಷ್ಟು ಇಎಸ್ಐ/ಪಿಎಫ್ ವಂತಿಕೆಯನ್ನು ಸೇರಿಸಿ *ರೂ:12,22,748/-ಗಳಿಗೆ (ಹನ್ನೆರಡು ಲಕ್ಷದ ಇಪ್ಪತ್ತೆರಡು ಸಾವಿರದ ಏಳು ನೂರ ನಲವತ್ತೆಂಟು ರೂಗಳು ಮಾತ್ರ) ದಿನಾಂಕ:01/04/2014ರಿಂದ ಅನ್ವಯವಾಗುವಂತೆ ಹೆಚ್ಚಿಸಿ ಮೂಲ ಕರಾರಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಹಾಗು ಸರಬರಾಜುದಾರರು ಅವರ ಕಾರ್ಮಿಕರಿಗೆ ಹೆಚ್ಚಿಸಿರುವ ಈ ತುಟ್ಟಿಭತ್ಯೆ ಹಾಗು ಹೆಚ್ಚುವರಿಯಾದ ತುಟ್ಟಿಭತ್ಯೆಗೆ ಇಎಸ್ಐ ಹಾಗು ಪಿಎಫ್‌ನ್ನು ಕಡ್ಡಾಯವಾಗಿ ಪಾವತಿಸುವ ಷರತ್ತಿಗೊಳಪಟ್ಟು* ಈ ಪರಿಷ್ಕೃತ ಸರಬರಾಜು ಆದೇಶ ಪತ್ರ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ,

ಶ್ರೀ.ಬಿ.ಜೆ.ಕುಮಾರ
ನಂ-01, ಶ್ರೀ.ನಿಲಯ, ರಂಗಮಂದಿರ ಹಿಂಭಾಗ,
ಬಾಗಲಗುಂಟೆ, ಬೆಂಗಳೂರು-560073
ಮೋ:9845937211

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆ & ಘತ್ಯಾನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಅಪರ ಆಯುಕ್ತರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು, ದಾಸರಹಳ್ಳಿ ವಲಯರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ನಿಯಂತ್ರಕರು (ಹಣಕಾಸು) ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗರವರ ಮಾಹಿತಿಗಾಗಿ ಹಾಗು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ನಂ:ಕಾ.ಪಾ.ಅ/ದಾ.ವಿ/ಕೋಟೇಶನ್-03/13-14/B

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ದಾಸರಹಳ್ಳಿ ವಿಭಾಗ. ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:28/11/2013.

ರವರಿಗೆ,
ಶ್ರೀ.ಎ.ಜಿ.ಪ್ರಭಾಕರ್.
# 189, 4ನೇ ಮೈನ್, ವಿದ್ಯಾನಗರ,
ಟಿ.ದಾಸರಹಳ್ಳಿ, ಬೆಂಗಳೂರು-560057.
ದೂ:7899933805, 9738118813.

"ಸರಬರಾಜು ಆದೇಶ"

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ:39ಕ್ಕೆ 01-ಡಿಸೆಂಬರ್-2013 ರಿಂದ ಮುಂದಿನ ಆದೇಶದವರೆಗೆ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾರ್ಯಕ್ಕೆ ಆಟೋ ಟಿಪ್ಪರ್, ಕಾಂಪ್ಯಾಕ್ಟರ್ ಹಾಗು 02 ಜನ ಸೂಪರ್‌ವೈಸರ್‌ಗಳನ್ನು ಪೂರೈಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿಯ ಅಲ್ಪಾವಧಿ ಕೊಟೇಶನ್ ಸಂಖ್ಯೆ: **BBMP/EE /DD/Quo-3/2013-14,** ದಿನಾಂಕ:25.11.2013.

************

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ:39ರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕೆಲಸಕ್ಕೆ ತಾವುಗಳು ಆಟೋ ಟಿಪ್ಪರ್‌ಗಳಿಗೆ ಹಾಗು ಕಾಂಪ್ಯಾಕ್ಟರ್ ವಾಹನ ಸರಬರಾಜು ಮಾಡಲು ಸಲ್ಲಿಸಿರುವ ದರವು ಅತಿ ಕಡಿಮೆ ದರವಾಗಿರುತ್ತದೆ. ಹಾಗು ಸೂಪರ್ ವೈಸರ್‌ಗಳಿಗೆ ತಾವುಗಳು ಹಾಗು ಶ್ರೀ.ಬಿ.ಹೆ.ಕುಮಾರರವರು ಸಲ್ಲಿಸಿರುವ ದರಗಳು ಸಮನಾದ ದರಗಳಾಗಿರುತ್ತವೆ.ಕಾರಣ ಕಾರ್ಮಿಕರನ್ನು ಹಾಗು ಟಿಪ್ಪರ್ ಲಾರಿಯನ್ನು ಮೇಲ್ವಿಚಾರಣೆ ಮಾಡಲು 02 ಜನ ಮೇಲ್ವಿಚಾರಕರನ್ನು ಸರಬರಾಜು ಮಾಡಲು ಶ್ರೀ..ಬಿ.ಹೆ.ಕುಮಾರರವರಿಗೆ ಹಾಗು ಆಟೋ ಟಿಪ್ಪರ್ ಹಾಗು ಕಾಂಪ್ಯಾಕ್ಟರ್ ವಾಹನಗಳನ್ನು ಮೇಲ್ವಿಚಾರಣೆ ಮಾಡಲು 02 ಜನ ಮೇಲ್ವಿಚಾರಕರನ್ನು ಸರಬರಾಜು ಮಾಡಲು ತಮಗೆ ಪ್ರತ್ಯೇಕ ಸರಬರಾಜು ಆದೇಶ ನೀಡಲಾಗುತ್ತಿದೆ.

ಮೇಲ್ಕಂಡ ಕಾಮಗಾರಿಯನ್ನು ಕೈಗೊಳ್ಳಲು ಸಕ್ಷಮ ಪ್ರಾಧಿಕಾರವು ನೀಡಿದ ಅನುಮೋದನೆಯಂತೆ ಹಾಗು ತಾವುಗಳು ಸಲ್ಲಿಸಿದ ಕೊಟೇಶನ್ ದರದಂತೆ ತಾವುಗಳು ಈ ಕೆಳಕಂಡಂತೆ ಕಾರ್ಮಿಕರನ್ನು ಹಾಗು ವಾಹನಗಳನ್ನು ಷರತ್ತು ಹಾಗು ನಿಬಂಧನೆಗೊಳಪಟ್ಟು ದಿನಾಂಕ:01/12/2013 ರಿಂದ ಮುಂದಿನ ಆದೇಶದವರೆಗೆ ಪೂರೈಸಲು ಸೂಚಿಸಿದೆ.

| ಕ್ರ.ಸಂ | ಸಿಬ್ಬಂದಿ, ವಾಹನ ಮತ್ತು ಸಲಕರಣೆಗಳ ವಿವರಗಳು | ಒದಗಿಸಬೇಕಾಗಿರುವ ಸಂಖ್ಯೆ | ಸಲ್ಲಿಸಿರುವ ದರ |
|---|---|---|---|
| 1 | ಆಟೋ ಟಿಪ್ಪರ್- ಮನೆ ಮನೆಯಿಂದ ಕಸ ಸಂಗ್ರಹಿಸಲು (ಪ್ರತಿ ಆಟೋ ಟಿಪ್ಪರ್ ಒಬ್ಬ ಡ್ರೈವರ್ ಹಾಗು ಒಬ್ಬ ಸಹಾಯಕರು ಹಾಗು ಅವರಿಗೆ ರಕ್ಷಣಾ ಸಾಮಗ್ರಿ ಹಾಗು | 13 | ರೂ. 27,700 ಪ್ರತಿ ಆಟೋಗೆ |

18

| | | | |
|---|---|---|---|
| | ಸಮವಸ್ತ್ರ ಸೇರಿ) | | |
| 2. | ಕಾಂಪ್ಯಾಕ್ಟರ್<br>(ಒಬ್ಬ ಡ್ರೈವರ್ ಹಾಗು ಒಬ್ಬ ಸಹಾಯಕರು ಹಾಗು ಅವರಿಗೆ ರಕ್ಷಣಾ ಸಾಮಗ್ರಿ ಹಾಗು ಸಮವಸ್ತ್ರ ಸೇರಿ) | 2 | ರೂ.1,18,000/- ಪ್ರತಿ ಕಾಂಪ್ಯಾಕ್ಟರ್‌ಗೆ |
| 3. | ಮೇಲ್ವಿಚಾರಕರು<br>(ಸಮವಸ್ತ್ರ ಒಳಗೊಂಡಂತೆ) | 2 | ರೂ.9,885/- ಯುನಿಟ್‌ಗೆ |
| | ಒಟ್ಟು ಮೊತ್ತ | | 6,15,870/- |

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ.

## ಷರತ್ತು ಮತ್ತು ನಿಬಂಧನೆಗಳು.

1. ತಾವುಗಳು ಕೆಲಸ ಪ್ರಾರಂಭಿಸುವ ಮುನ್ನ ಕಾರ್ಮಿಕ ಇಲಾಖೆಯಿಂದ ಪರವಾನಗಿಯನ್ನು ಪಡೆಯತಕ್ಕದ್ದು. ಹಾಗು ಇದರ ಪ್ರತಿಯನ್ನು ಕಛೇರಿಗೆ ಸಲ್ಲಿಸತಕ್ಕದ್ದು.
2. ಪ್ರತಿ ನಿತ್ಯ ತಾವುಗಳು ಸಲ್ಲಿಸಿದ ಕೊಟೇಶನ್‌ನಂತೆ ಕಾರ್ಮಿಕರನ್ನು ಹಾಗು ವಾಹನಗಳನ್ನು ಪೂರೈಸಬೇಕು.
3. ತಮ್ಮಿಂದ ಕಾರ್ಯ ನಿರ್ವಹಿಸುವ ಎಲ್ಲಾ ಕಾರ್ಮಿಕರು, ವಾಹನಗಳ ಚಾಲಕರು ಹಾಗು ಮೇಲ್ವಿಚಾರಕರಿಗೆ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ಪಾವತಿಯಾಗುವಂತೆ ಚೆಕ್/ಇಸಿಎಸ್/ಡೈರಕ್ಟ್ ಕ್ರೆಡಿಟ್ ಮೂಲಕ ವೇತನ ಹಾಗು ಇ.ಎಸ್.ಐ/ ಪಿಎಫ್‌ನ್ನು ತಪ್ಪದೇ ಪಾವತಿಸಬೇಕು.
4. ತಮ್ಮ ಕಾರ್ಮಿಕರು 14 ದಿನಕ್ಕಿಂತ ಕಡಿಮೆಯಿಲ್ಲದೇ ಕೆಲಸ ನಿರ್ವಹಿಸಿದ್ದಲ್ಲಿ ಆತನಿಗು ಕೂಡ ಚೆಕ್/ ಇಸಿಎಸ್/ಡೈರಕ್ಟ್ ಕ್ರೆಡಿಟ್ ಮೂಲಕ ವೇತನ ಪಾವತಿಸಬೇಕು.
5. ಕಾರ್ಮಿಕರಿಗೆ ವೇತನವನ್ನು ಕಾರ್ಮಿಕ ಇಲಾಖೆಯವತಿಯಿಂದ ಹೊರಡಿಸಿದ ಸುತ್ತೋಲೆ ಆದೇಶ ಸಂಖ್ಯೆ: **KE/152/LWA/2008, Date:21/02/2011**ರಂತೆ ನೀಡಬೇಕು ಹಾಗು ಕಾರ್ಮಿಕ ಇಲಾಖೆಯು ದಿನಾಂಕ:01/04/2013 ರಿಂದ ಕಾರ್ಮಿಕರ DA ಯನ್ನು ಪ್ರಕಟಿಸಿದ್ದು ಸದರಿ ನಿಯಮಾನುಸಾರ ಕಾರ್ಮಿಕರಿಗೆ ವೇತನ ಪಾವತಿಸಬೇಕು.
6. ತಾವುಗಳು ಕಾರ್ಮಿಕರಿಗೆ ವೇತನ ಪಾವತಿಸುವ ಸಮಯದಲ್ಲಿ ಬಿ.ಬಿ.ಎಂ.ಪಿ ಯ ಅಧಿಕಾರಿ ಹಾಗು ಸಿಬ್ಬಂಧಿಯ ಸಮ್ಮುಖದಲ್ಲಿ ನೀಡತಕ್ಕದ್ದು.
7. ಕಾರ್ಮಿಕರಿಗೆ ಇಎಸ್ಐ ಹಾಗು ಪಿಎಫ್‌ನ್ನು ಈ ಕೆಳಕಂಡ ನಿಯಮದಂತೆ ಪಾವತಿಸಲು ಹಾಗು ಪಾವತಿಸಿದ ದಾಖಲೆಗಳನ್ನು ತಿಂಗಳ ಕೊನೆಯ ಬಿಲ್‌ನೊಂದಿಗೆ ಆರೋಗ್ಯ ಪರಿವೀಕ್ಷಕರು, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರುರವರ ದೃಢೀಕರಣ ಪಡೆದು ಕಛೇರಿಗೆ ಸಲ್ಲಿಸತಕ್ಕದ್ದು.

| ಕ್ರ.ಸಂ | ವಂತಿಕೆ | ಇಎಸ್ಐ | ಪಿಎಫ್ | ಒಟ್ಟು |
|---|---|---|---|---|
| 1. | ಕಾರ್ಮಿಕರ ವಂತಿಕೆ | 1.75% | 12% | 13.75% |
| 2. | ಗುತ್ತಿಗೆದಾರರ ವಂತಿಕೆ | 4.75% | 13.61% | 18.36% |
| | ಒಟ್ಟು | | | 32.11% |

8. ತಮ್ಮಿಂದ ಕಾರ್ಯ ನಿರ್ವಹಿಸುವ ಎಲ್ಲಾ ಕಾರ್ಮಿಕರ ವಯಸ್ಸು ಕನಿಷ್ಠ 18 ವರ್ಷ ಹಾಗು ಗರಿಷ್ಠ 60 ವರ್ಷದ ವಯಸ್ಸಿನವರಾಗಿರಬೇಕು. ಹಾಗು ಕನಿಷ್ಠ 30%ರಷ್ಟು ಕಾರ್ಮಿಕರು ಪುರುಷ ಕಾರ್ಮಿಕರಾಗಿರಬೇಕು.
9. ತಮ್ಮ ಬಳ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕರಿಗೆ ಗುರುತಿನ ಚೀಟಿಯನ್ನು ನೀಡಬೇಕು ಹಾಗು ಗುರುತಿನ ಚೀಟಿಯಲ್ಲಿ ಕಾರ್ಮಿಕರ ಇ.ಎಸ್.ಐ/ಪಿಎಫ್‌ನ ನೋಂದಣಿ ಸಂಖ್ಯೆಯನ್ನು ದಾಖಲಿಸಿರಬೇಕು.
10. ತಮ್ಮ ಕಾರ್ಮಿಕರಿಗೆ ರಕ್ಷಣಾ ಸಾಮಗ್ರಿಗಳಾದ ಮಾಸ್ಕ್, ಕೈಗವಸ, ಗಮ್ ಬೂಟ್ಸ್,ಕ್ಯಾಪ್ಸ್, ಚಪ್ಪಲ್‌ಗಳು, ಲಾಂಗ್ ಹ್ಯಾಂಡಲ್ ಬ್ರೂಮ್ಸ್, ಸ್ಕ್ರ್ಯಾಪರ್ಸ್, ಕಲೆಕ್ಷನ್ ಪ್ಲೇಟ್, ಗ್ಯಾಮೆಲಾ, ಚರಂಡಿ ಸ್ವಚ್ಛಗೊಳಸುವ ಸಾಮಗ್ರಿಗಳು, ಸ್ಪೇಡ್, ಗಿಡ ಕತ್ತರಿಸುವ ಯಂತ್ರಗಳನ್ನು ನೀಡಬೇಕು ಹಾಗು ಎಲ್ಲಾ ಕಾರ್ಮಿಕರಿಗೆ, ವಾಹನ ಚಾಲಕರಿಗೆ ಹಾಗು ಮೇಲ್ವಿಚಾರಕರಿಗೆ ಸಮವಸ್ತ್ರಗಳನ್ನು ನೀಡಬೇಕು.
11. ಹಸಿ ಕಸವನ್ನು ದಿನನಿತ್ಯ ಹಾಗು ಒಣ ಕಸವನ್ನು ವಾರಕ್ಕೆರಡು ಬಾರಿ ಪ್ರತ್ಯೇಕವಾಗಿ ಮನೆ ಮನೆಯಿಂದ ಹಾಗು ವಾಣಿಜ್ಯ ಸಂಕೀರ್ಣಗಳಂದ ಸಂಗ್ರಹಿಸಬೇಕು. ಒಣ ಕಸವನ್ನು ವಾರ್ಡ್‌ವತಿಯಿಂದ ನಿರ್ಮಿಸಿದ ಒಣತ್ಯಾಜ್ಯ ಸಂಗ್ರಹಣ ಕೇಂದ್ರಗಳಗೆ ನೀಡಬೇಕು.
12. ವಾರ್ಡ್ ವ್ಯಾಪ್ತಿಯಲ್ಲಿನ ಕಸದ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿ ನಿತ್ಯ ತೆಗೆದು ಸ್ವಚ್ಛಗೊಳಸಬೇಕು ಹಾಗು ಈ ಕುರಿತಂತೆ ಬ್ಲಾಕ್ ಸ್ಪಾಟ್‌ಗಳಗೆ ಕಸ ಹಾಕುತ್ತಿರುವ ಸಾರ್ವಜನಿಕರಿಗೆ ಅರಿವು ಮೂಡಿಸಿ ಬ್ಲಾಕ್ ಸ್ಪಾಟ್‌ಗಳಗೆ ಹಾಕದಂತೆ ತಿಳಸಬೇಕು.
13. ರಸ್ತೆಗಳು, ರಸ್ತೆ ಬದಿಯ ಚರಂಡಿಗಳು, ಪುಟ್ ಪಾತ್‌ಗಳು,ಕನ್ಸ್‌ರ್ವೆನ್ಸಿಗಳು, ರಸ್ತೆ ಬದಿಯ ಗಿಡ ಗಂಟಿಗಳು ಹಾಗು ಶೋಲ್ಡರ್ ಡ್ರೈನ್‌ಗಳನ್ನು ದಿನನಿತ್ಯ ಸ್ವಚ್ಛಗೊಳಸಬೇಕು.
14. ಮೂಲದಲ್ಲೇ ಕಸ ವಿಂಗಡಿಸುವ ಕುರಿತಂತೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಹಾಗು ಅದಕ್ಕೆ ಸಂಬಂಧಿಸಿದಂತೆ ಮಾಹಿತಿ ಶಿಕ್ಷಣ ಹಾಗು ಸಂವಹನ (IEC Activities) ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.
15. ತಮ್ಮಿಂದ ನಿಯೋಜಿಸಿರುವ ಮೇಲ್ವಿಚಾರಕರ ಮೊಬೈಲ್ ಸಂಖ್ಯೆಯನ್ನು ಕಛೇರಿಗೆ ನೀಡಬೇಕು.
16. ಘನತ್ಯಾಜ್ಯ ನಿರ್ವಹಣೆಯಲ್ಲಿ ನಿವಾಸಿಗಳು, ಬಡಾವಣೆಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ತೊಡಗಿಸಿಕೊಳ್ಳಬೇಕು.
17. ಆಟೋ ಟಿಪ್ಪರ್‌ಗಳಗೆ ಧ್ವನಿ ವರ್ಧಕಗಳನ್ನು (ಮೈಕ್) ಅಳವಡಿಸಬೇಕು.
18. ಸಾರ್ವಜನಿಕರು ಮನೆಮನೆಯಿಂದ ಕಸವನ್ನು ನೀಡದಿದ್ದಲ್ಲಿ ಈ ಕುರಿತಾದ ಮಾಹಿತಿಯನ್ನು ಸ.ಕಾ.ಅ ಪೀಣ್ಯ ಕೈಗಾರಿಕ ಪ್ರದೇಶ ಉಪವಿಭಾಗರವರಿಗೆ ಲಿಖಿತ ರೂಪದಲ್ಲಿ ನೀಡಬೇಕು.
19. ತಮ್ಮಗಳ ಕಾರ್ಮಿಕರು ಪಾಲಿಕೆಗೆ ಸಂಬಂಧಿಸಿದ ಆಸ್ತಿಗಳನ್ನೇನಾದರು ನಾಶ ಮಾಡಿದಲ್ಲಿ ತಾವೇ ನೇರವಾಗಿ ಹೊಣೆಗಾರರು.

20

20. ತಾವುಗಳು ಪೂರೈಸುವ ವಾಹನಗಳು 2006 ರಿಂದ 2012ರ ಮಾಡೆಲ್‌ಗಳಾಗಿರಬೇಕು. ವಾಹನಗಳ ರಿಜಿಸ್ಟ್ರೇಷನ್ ಸಂಖ್ಯೆ ಹಾಗು ಮಾಡೆಲ್‌ಗಳ ಕುರಿತಾದ ಮಾಹಿತಿಯನ್ನು ಕೂಡಲೇ ಕಛೇರಿಗೆ ತಿಳಿಸಬೇಕು.

21. ತಮ್ಮ ವಾಹನಗಳನ್ನು ತಮ್ಮ ಚಾಲಕರು ಎಲ್ಲೆಂದರಲ್ಲಿ ನಿಲ್ಲಿಸದಂತೆ, ಸಾರ್ವಜನಿಕರಿಗೆ ಹಾಗು ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ವಹಿಸಬೇಕು.

22. ಸದರಿ ಸರಬರಾಜು ಆದೇಶವು, ಕಾಲಕಾಲಕ್ಕೆ ಘನ ನ್ಯಾಯಾಲಯವು ಹಾಗು ಕೇಂದ್ರ ಕಛೇರಿಯು ನೀಡುವ ಸಲಹೆ, ಸೂಚನೆ ಹಾಗು ನಿರ್ದೇಶನಗಳಿಗೆ ಒಳಪಟ್ಟಿರುತ್ತದೆ.

23. ತಾವುಗಳು ಸ್ವಚ್ಛತಾ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಹಬ್ಬಗಳಂದ ಕಸದ ಪ್ರಮಾಣವು ಜಾಸ್ತಿಯಾದಲ್ಲಿ ಸದರಿ ಕಸವನ್ನು ತಾವುಗಳೇ ವಿಲೇವಾರಿ ಮಾಡತಕ್ಕದ್ದು.

24. ವಲಯ ಕಛೇರಿಯಲ್ಲಿ ಅಥವಾ ಉಪವಿಭಾಗ ಕಛೇರಿಯಲ್ಲಿ ಚುನಾಯಿತ ಪ್ರತಿನಿಧಿಗಳಾದ ಮಾನ್ಯ ಶಾಸಕರು ಅಥವಾ ಪಾಲಿಕೆಯ ಸದಸ್ಯರೇನಾದರು ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಯ ಕುರಿತು ಸಭೆಯನ್ನು ನಡೆಸಿದಲ್ಲಿ ತಾವುಗಳು ತಪ್ಪದೇ ಹಾಜರಾಗತಕ್ಕದ್ದು.

28

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ.

ಪ್ರತಿಯನ್ನು

1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕ ಪ್ರದೇಶ ಉಪವಿಭಾಗರವರ ಮಾಹಿತಿಗಾಗಿ ಹಾಗು ಮೇಲ್ಕಂಡ ಷರತ್ತು ಮತ್ತು ನಿಬಂದನೆಗಳನ್ನು ಸರಬರಾಜುದಾರರು ಸರಿಯಾಗಿ ಪಾಲನೆ ಮಾಡಿದ್ದಾರೆಯೆ ಎಂಬ ಬಗ್ಗೆ ತಮ್ಮ ಹಂತದಲ್ಲೇ ಪರಿಶೀಲಿಸಿಕೊಂಡು ಪ್ರತಿ ತಿಂಗಳ 03ನೇ ತಾರೀಖಿನೊಳಗೆ ಅಗತ್ಯ ದಾಖಲೆಗಳೊಂದಿಗೆ (ಫೋಟೋಗಳ ಸಮೇತ) ತಪ್ಪದೇ ಬಿಲ್‌ನ್ನು ವಿಭಾಗ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

O/C

(1) Basheer AE

(2) Received copy

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಾಸರಹಳ್ಳಿ ವಲಯ,

ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು –560073.

ಸಂ:ಕಾ.ಅ/ದಾ.ವಿ/ಕೋಟೇಶನ್–03/2014–15/B

ಕಾರ್ಯಪಾಲಕ ಅಭಿಯಂತರರ ಕಛೇರಿ,
ದಾಸರಹಳ್ಳಿ ವಿಭಾಗ
ದಿನಾಂಕ: 05/12/2014

ಪರಿಷ್ಕೃತ ಸರಬರಾಜು ಆದೇಶ

**ವಿಷಯ:–** ದಾಸರಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ:39ರ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾರ್ಯ ನಿರ್ವಹಿಸಲು ದಿನಾಂಕ:01/04/2014 ರಿಂದ ಅನ್ವಯವಾಗುವಂತೆ ಕಾರ್ಮಿಕ ಇಲಾಖೆಯು ಹೆಚ್ಚಿಸಿದ ತುಟ್ಟಿಭತ್ಯೆಯನ್ನು ವಾರ್ಡ್ ನಿರ್ವಹಣೆ ವೆಚ್ಚಕ್ಕೆ ಸೇರಿಸಿ ಪರಿಷ್ಕೃತ ಸರಬರಾಜು ಆದೇಶ ಪತ್ರ ನೀಡುವ ಬಗ್ಗೆ.

**ಉಲ್ಲೇಖ:–**

1. ಈ ಕಛೇರಿಯ ಅಲ್ಪಾವಧಿ ಕೋಟೇಷನ್ ಸಂಖ್ಯೆ::BBMP/EE/DD/Quo-3/2013-14 ದಿನಾಂಕ:25.11.2013.
2. ವಾರ್ಡ್ ಸಂಖ್ಯೆ:39ರ ಘನತ್ಯಾಜ್ಯ ನಿರ್ವಹಣೆ & ವಿಲೇವಾರಿಗೆ ಶ್ರೀ.ಎ.ಜಿ.ಪ್ರಭಾಕರ್‌ರವರೊಂದಿಗೆ ವಿಭಾಗ ಕಛೇರಿಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯ ಪತ್ರದ ಸಂಖ್ಯೆ:BBMP/EE/DD/QUO-03/2013–14/B. ದಿನಾಂಕ:28.11.2013.
3. ಈ ಕಛೇರಿಯವತಿಯಿಂದ ಶ್ರೀ.ಎ.ಜಿ.ಪ್ರಭಾಕರ್‌ರವರಿಗೆ ನೀಡಿದ ಸರಬರಾಜು ಆದೇಶ ಪತ್ರ ಸಂಖ್ಯೆ: ಕಾ.ಪಾ.ಅ/ದಾ.ವಿ/ಕೋಟೇಷನ್–03/13–14/B, ದಿನಾಂಕ:28/11/2013.
4. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಆ/ಪಿಆರ್/ಜಿ–3971/14–15, ದಿನಾಂಕ:18.08.2014.

********

ಮೇಲ್ಕಂಡ ವಿಷಯ ಹಾಗು ಉಲ್ಲೇಖ ಪತ್ರಗಳಿಗೆ ಸಂಬಂಧಿಸಿದಂತೆ, ಶ್ರೀ.ಎ.ಜಿ.ಪ್ರಭಾಕರ್‌ರರವರಿಗೆ ದಾಸರಹಳ್ಳಿ ವಲಯದ ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗದ ವಾರ್ಡ್ ಸಂಖ್ಯೆ:39ರ ಘನತ್ಯಾಜ್ಯ ನಿರ್ವಹಣೆ ಹಾಗು ವಿಲೇವಾರಿ ಕಾಮಗಾರಿಯನ್ನು ನಿರ್ವಹಿಸಲು 13 ಆಟೋ ಟಿಪ್ಪರ್, 02 ಕಾಂಪ್ಯಾಕ್ಟರ್ ಹಾಗು 02 ಜನ ಮೇಲ್ವಿಚಾರಕರನ್ನು ಸರಬರಾಜು ಮಾಡಲು ಉಲ್ಲೇಖ (2) ರಂತೆ ಒಡಂಬಡಿಕೆ ಮಾಡಿಕೊಂಡು ಉಲ್ಲೇಖ (3) ರಂತೆ ಈ ಕಛೇರಿಯವತಿಯಿಂದ ಸರಬರಾಜು ಆದೇಶವನ್ನು ನೀಡಲಾಗಿರುತ್ತದೆ.

ಉಲ್ಲೇಖ (2) ರಂತೆ ಈ ಕಛೇರಿಯವತಿಯಿಂದ ಸರಬರಾಜುದಾರರಾದ ಶ್ರೀ.ಎ.ಜಿ.ಪ್ರಭಾಕರ್ ರವರೊಂದಿಗೆ ಮಾಡಿಕೊಂಡ ಒಡಂಬಡಿಕೆ ಪತ್ರದ Article 4 "Payment Terms" ರಡಿಯಲ್ಲಿ ಕ್ರಮ ಸಂಖ್ಯೆ "ಸಿ" ರನ್ವಯ *ಸರಬರಾಜುದಾರರು ಅವರ ಕಾರ್ಮಿಕರಿಗೆ ಸರ್ಕಾರದ ಆದೇಶ ಸಂಖ್ಯೆ:KE/152/LWA/2008, ದಿನಾಂಕ:21/02/2011 ರನ್ವಯ ವೇತನ ನೀಡುವುದು ಹಾಗು ಕಾರ್ಮಿಕ ಇಲಾಖೆಯು ಭವಿಷ್ಯದಲ್ಲಿ ಕಾರ್ಮಿಕರ ವೇತನವನ್ನು ಹೆಚ್ಚಿಸಿದಲ್ಲಿ ಸದರಿ ವೇತನದ ವ್ಯತ್ಯಾಸವನ್ನು ಪಾಲಿಕೆಯವತಿಯಿಂದ ಭರಿಸುವುದು"* ಎಂದು ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ.

ಕಾರ್ಮಿಕ ಇಲಾಖೆಯು ದಿನಾಂಕ:01/04/2014 ರಿಂದ ದಿನಾಂಕ:31/03/2015 ರವರೆಗೆ ಪ್ರತಿ ಮಾಹೆಗೆ ಪ್ರತಿ ಕಾರ್ಮಿಕರಿಗೆ ರೂ:846/–ಗಳ ತುಟ್ಟಿ ಭತ್ಯೆಯನ್ನು ಪ್ರಕಟಿಸಿದ್ದು, ಉಲ್ಲೇಖ(4)ರ ಮಾನ್ಯ ಆಯುಕ್ತರವರ ಕಛೇರಿ ಆದೇಶದಂತೆ ವಾರ್ಡ್ ಸಂಖ್ಯೆ:39 ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ 32 ಜನ ಕಾರ್ಮಿಕರಿಗೆ

ತುಟ್ಟಿ ಭತ್ಯೆಯ ಜೊತೆಗೆ ಶೇ.18.36 ರಷ್ಟು ಗುತ್ತಿಗೆದಾರರ ಇಎಸ್ಐ ಹಾಗು ಪಿಎಫ್ ವಂತಿಕೆ ಸೇರಿಸಿ ಈ ಹಿಂದಿನ ವಾರ್ಡ್ ನಿರ್ವಹಣೆ ಮೊತ್ತ ರೂ:6,15,870/-ಗಳಿಗೆ ರೂ:32,042/-ಗಳ ತುಟ್ಟಿಭತ್ಯೆ ಮತ್ತು ಶೇ.18.36ರಷ್ಟು ಇಎಸ್ಐ/ಪಿಎಫ್ ವಂತಿಕೆಯನ್ನು ಸೇರಿಸಿ *ರೂ:6,47,912/-ಗಳಿಗೆ (ಆರು ಲಕ್ಷದ ನಲವತ್ತೇಳು ಸಾವಿರದ ಒಂಬೈ ನೂರ ಹನ್ನೆರಡು ರೂಗಳು ಮಾತ್ರ) ದಿನಾಂಕ:01/04/2014ರಿಂದ ಅನ್ವಯವಾಗುವಂತೆ ಹೆಚ್ಚಿಸಿ ಮೂಲ ಕರಾರಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಹಾಗು ಸರಬರಾಜುದಾರರು ಅವರ ಕಾರ್ಮಿಕರಿಗೆ ಹೆಚ್ಚಿಸಿರುವ ಈ ತುಟ್ಟಿಭತ್ಯೆ ಹಾಗು ಹೆಚ್ಚುವರಿಯಾದ ತುಟ್ಟಿಭತ್ಯೆಗೆ ಇಎಸ್ಐ ಹಾಗು ಪಿಎಫ್‌ನ್ನು ಕಡ್ಡಾಯವಾಗಿ ಪಾವತಿಸುವ ಷರತ್ತಿಗೊಳಪಟ್ಟು* ಈ ಪರಿಷ್ಕೃತ ಸರಬರಾಜು ಆದೇಶ ಪತ್ರ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ರವರಿಗೆ,

ಶ್ರೀ.ಎ.ಜಿ.ಪ್ರಭಾಕರ್
ನಂ-189, 4ನೇ ಮೈನ್, ವಿದ್ಯಾನಗರ,
ಟಿ.ದಾಸರಹಳ್ಳಿ, ಬೆಂಗಳೂರು-560057
ಮೋ:7899933805, 9738118813

ಪ್ರತಿಯನ್ನು:
1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆ & ಘತ್ಯಾನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಅಪರ ಆಯುಕ್ತರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು, ದಾಸರಹಳ್ಳಿ ವಲಯರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ನಿಯಂತ್ರಕರು (ಹಣಕಾಸು) ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗರವರ ಮಾಹಿತಿಗಾಗಿ ಹಾಗು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಕಛೇರಿ ಕಡತಕ್ಕೆ.